ವರ್ಗದವರು ಶ್ರೀಮಂತ ವ್ಯಕ್ತಿಗಳಿಗೆ ಮಾರಾಟ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಈಗಾಗಲೇ ಒಬ್ಬ ನೌಕರರನ್ನು ಅಮಾನತ್ತಿನಲ್ಲಿಡಲಾಗಿರುವುದು ಸರ್ಕಾರಕ್ಕೆ ತಿಳಿದಿದೆಯೇ; ಉಳಿದಂತೆ ಇತರೆ ಅಧಿಕಾರಿಗಳಿಗೆ ಯಾವಾಗ ಶಿಕ್ಷೆ ನೀಡಲಾಗುವುದು;

ಇ) ಸಾರ್ವಜನಿಕ ಉದ್ದೇಶಗಳ ಜಾಗವನ್ನು ಸಾರ್ವಜನಿಕರಿಗೆ ಉಪಯುಕ್ತವಾಗುವಂತೆ ಮಾಡಲು ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?

ಶ್ರೀ. ಬಾಲಚಂದ್ರ ಲ. ಜಾರಕಿಹೊಳಿ (ಪೌರಾಡಳಿತ, ಸ್ಥಳೀಯ ಸಂಸ್ಥೆಗಳ ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು) :

ಅ) ಕಡೂರು ಪುರಸಭಾ ವ್ಯಾಪ್ತಿಯಲ್ಲಿ ಶವ ಸಂಸ್ಕಾರಕ್ಕಾಗಿ ಮೀಸಲಿಟ್ಟ ಜಾಗವನ್ನು ಕಡೂರು ಪುರಸಭೆಯ ಹಿಂದಿನ ಕಂದಾಯ ನಿರ್ಧರಣಾಧಿಕಾರಿಯು ಅನಧಿಕೃತವಾಗಿ ಖಾತೆ ಮಾಡಿರುವ್ರದು ಗಮನಕ್ಕೆ ಬಂದಿದೆ.

ಆ) ಶವಸಂಸ್ಕಾರಕ್ಕಾಗಿ ಮೀಸಲಿಟ್ಟ ಜಾಗವನ್ನು ಅನಧಿಕೃತವಾಗಿ ಖಾತೆ ಮಾಡಿದ ಸಂಬಂಧ ಹಿಂದಿನ ಕಂದಾಯ ನಿರ್ಧರಣಾಧಿಕಾರಿ ಶ್ರೀ ಕೆ.ಎಂ.ಸತ್ಯನಾರಾಯಣ ಇವರ ವಿರುದ್ಧದ ಆಪಾದನೆಗಳ ಕುರಿತು ಪರಿಶೀಲಿಸಿ ನಿಯಮಾನುಸಾರ ಶಿಸ್ತು ಕ್ರಮವಹಿಸಲಾಗುತ್ತದೆ. ಮತ್ತು ಬೇರೊಂದು ಪ್ರಕರಣವಾದ 2002ರಿಂದ 2007ನೇ ಸಾಲಿನ ಅವಧಿಯಲ್ಲಿ ಅಭಿವೃದ್ಧಿ ಶುಲ್ಕ ಪಾವತಿಸಿ ಕೊಳ್ಳದೆ ಖಾತೆ ಮಾಡಿರುವ ಪ್ರಕರಣಕ್ಕೆ ಸಂಬಂಧಿಸಿದಂತೆ ಶ್ರೀ ಟಿ.ಎಂ. ಗಂಗಾಧರಪ್ಪ, ಪ್ರಥಮ ದರ್ಜೆ ಸಹಾಯಕರು ಇವರನ್ನು ಸೇವೆಯಿಂದ ಅಮಾನತ್ತುಗೊಳಿಸಲಾಗಿದೆ.

ಇ) 1964ರ ಕರ್ನಾಟಕ ಪುರಸಭೆಗಳ ಕಾಯ್ದೆ ಸೆಕ್ಷನ್ 87 (ಎಫ್) ರಲ್ಲಿ ಸಾರ್ವಜನಿಕ ಸ್ವತ್ತುಗಳು/ಜಾಗಗಳು ಮುನಿಸಿಪಲ್ ಕೌನ್ಸಿಲ್‌ನಲ್ಲಿ ನಿಹಿತವಾಗಿರಲಿ ಅಥವಾ ಸರ್ಕಾರಕ್ಕೆ ಸೇರಿರಲಿ ಅವುಗಳಲ್ಲಿನ ಅಡಚಣೆಗಳನ್ನು ತೆಗೆದುಹಾಕಲು ಮತ್ತು 91 ಬಿ ರಲ್ಲಿ ನಗರ ಸ್ಥಳೀಯ ಸಂಸ್ಥೆಗಳ ಚುನಾಯಿತ ಮಂಡಳಿಯು ಸಾರ್ವಜನಿಕ ಉದ್ಯಾನವನ ಸ್ಥಾಪನೆ ಮತ್ತು ನಿರ್ವಹಣೆ ಮಾಡಲು ಅಧಿಕಾರ ಹೊಂದಿರುತ್ತದೆ.

637 ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೀದರ್ ಲೋಕೋಪಯೋಗಿ ವಿಭಾಗದಲ್ಲಿ ಕಳೆದ ಮೂರು ವರ್ಷಗಳ ಅವಧಿಯಲ್ಲಿ ಕೇಂದ್ರ ಸರ್ಕಾರದ ನೆರವಿನ ಸಿಆರ್‌ಎಫ್ ಮತ್ತು ಇತರೆ ಕೇಂದ್ರದ ನೆರವಿನ ಹಾಗೂ ರಾಜ್ಯ ಸರ್ಕಾರದ ಯಾವ ಯಾವ ಯೋಜನೆಯ

ರಸ್ತೆ ಕಾಮಗಾರಿಗಳು ಪ್ರಗತಿಯಲ್ಲಿವೆ (ವಿಧಾನಸಭಾ ಕ್ಷೇತ್ರವಾರು ವಿವರಗಳನ್ನು ಒದಗಿಸುವುದು);

ಆ) ಈ ರಸ್ತೆ ಕಾಮಗಾರಿಗಳ ಪೈಕಿ ಯಾವ ಯಾವ ರಸ್ತೆಗಳು ಅಂತರ ರಾಜ್ಯಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಗಳಾಗಿವೆ ಮತ್ತು ಇವು ಎಷ್ಟು ಕಿ.ಮೀ. ರಸ್ತೆಗಳಾಗಿವೆ;

ಇ) ಇದಕ್ಕಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಬಿಡುಗಡೆ ಮಾಡಲಾದ ಹಣದ ಮೊತ್ತ ವೆಷ್ಟು (ಭಾಲ್ಕಿ ವಿಧಾನಸಭಾ ಕ್ಷೇತ್ರದಲ್ಲಿ ಬರುವ ರಸ್ತೆಗಳ ವಿವರಗಳನ್ನು ಒದಗಿಸುವುದು);

ಈ) ಗುತ್ತಿಗೆ ನಿಯಮಗಳ ಪ್ರಕಾರ ಈ ರಸ್ತೆ ಕಾಮಗಾರಿಗಳು ಎಂದು ಮುಕ್ತಾಯವಾಗಬೇಕಾಗಿತ್ತು ನಿಗದಿಪಡಿಸಿದ ದಿನಾಂಕದೊಳಗೆ ಕಾಮಗಾರಿಗಳು ಪೂರ್ಣಗೊಂಡಿವೆಯೇ;

ಉ) ಕಾಮಗಾರಿಗಳು ಅಪೂರ್ಣವಾಗಿದ್ದಲ್ಲಿ, ಇದಕ್ಕೆ ಕಾರಣರಾದವರ ಮೇಲೆ ಸರ್ಕಾರ ಯಾವ ಯಾವ ಕ್ರಮಗಳನ್ನು ಕೈಗೊಳ್ಳುವುದು;

ಊ) ನಿಗದಿತ ಸಮಯದಲ್ಲಿ ಈ ಕಾಮಗಾರಿಗಳನ್ನು ಮುಕ್ತಾಯಗೊಳಿಸಲು ಸರ್ಕಾರದ ಮುಂದಿರುವ ಕ್ರಮಗಳೇನು;

ಋ) ಪ್ರಗತಿಯಲ್ಲಿರುವ ರಸ್ತೆ ಕಾಮಗಾರಿಗಳ ಗುಣಮಟ್ಟವನ್ನು ಪರೀಕ್ಷಿಸಲು ಕಾರ್ಯಪಾಲಕ ಅಭಿಯಂತರರು ಎಷ್ಟು ಬಾರಿ ಸ್ಥಳಕ್ಕೆ ಭೇಟಿ ನೀಡಿದ್ದಾರೆ;

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :

ಅ) ವಿವರಗಳನ್ನು ಪ್ರತ್ಯೇಕವಾಗಿ ನಮೂನೆಯಲ್ಲಿ ಭರ್ತಿ ಮಾಡಿ ಲಗತ್ತಿಸಿದೆ.

ಆ) ಬೀದರ್ ವಿಭಾಗದಲ್ಲಿ ಮೇಲೆ ವಿವರಿಸಿದ ರಸ್ತೆಗಳ ಪೈಕಿ ಕಮಲಾನಗರ–ಗೂನಳ್ಳಿ ರಾಜ್ಯ ಹೆದ್ದಾರಿ–4ನ್ನು ಅಂತರ್ ರಾಜ್ಯಕ್ಕೆ ಸಂಪರ್ಕಿಸುತ್ತಿದೆ. ಔರಾದ್ ತಾಲ್ಲೂಕಿನಲ್ಲಿ ಕಿ.ಮೀ.0.00ರಿಂದ 14.70, ಕಿ.ಮೀ.14.70ರಿಂದ 44.70ರವರೆಗೆ ಭಾಲ್ಕಿ ತಾಲ್ಲೂಕಿನಲ್ಲಿ ರಸ್ತೆ ಹಾಯ್ದು ಹೋಗಿರುತ್ತದೆ.

ಇ) ಕಮಲಾನಗರ–ಗೂನಳ್ಳಿ ರಾಜ್ಯ ಹೆದ್ದಾರಿ–4 ರಸ್ತೆಯನ್ನು ಕೇಂದ್ರ ಸರ್ಕಾರದ ರೂ.35.97ಕೋಟಿ ಮತ್ತು ರಾಜ್ಯ ಸರ್ಕಾರದ ರೂ.7.17 ಕೋಟಿ ಅನುದಾನದಡಿ ಒಟ್ಟು ರೂ.43.11 ಕೋಟಿಗಳ ಅನುದಾನದ ನೆರವಿನಿಂದ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ.

ಕ್ರ. ಸಂ.	ರಸ್ತೆಯ ಹೆಸರು	ರಸ್ತೆಯ ಉದ್ದ (ಕಿ.ಮೀ)	ಅಂದಾಜು ಮೊತ್ತ (ಕೋಟಿಗಳಲ್ಲಿ) (ಬೀದರ್, ಔರಾದ್, ಭಾಲ್ಕಿ ಕ್ಷೇತ್ರ ಸೇರಿ)
1	ಕಮಲಾನಗರ–ಗೂನಳ್ಳಿ ರಾಜ್ಯ ಹೆದ್ದಾರಿ–4	30.00	43.11

ಈ) ಗುತ್ತಿಗೆ ನಿಯಮದ ಪ್ರಕಾರ ಈ ರಸ್ತೆಗಳ ಕಾಮಗಾರಿಗಳು 2009 ಆಗಸ್ಟ್ ಅಂತ್ಯಕ್ಕೆ ಪೂರ್ಣಗೊಳಿಸಬೇಕಾಗಿದೆ. ಇದರಲ್ಲಿ ಕೆಲವೊಂದು ಕಾಮಗಾರಿಗಳಿಗೆ ನಿಗದಿಪಡಿಸಿದ ಅವಧಿ ಮುಗಿದಿರುತ್ತದೆ. ಟೆಂಡರ್ ನಿಯಮಗಳ ಪ್ರಕಾರ ಗುತ್ತಿಗೆದಾರರಿಗೆ ಅಂತಿಮ ನೋಟೀಸು ನೀಡಿ, ಟೆಂಡರ್ ನಿಯಮಗಳನ್ವಯ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಉ) ಕಾಮಗಾರಿಗಳನ್ನು ನಿಗದಿತ ಸಮಯದಲ್ಲಿ ಮುಕ್ತಾಯಗೊಳ್ಳದಿದ್ದ ಪಕ್ಷದಲ್ಲಿ, ಟೆಂಡರ್ ನಿಯಾನುಸಾರ ರಿಸ್ಕ್ ಮತ್ತು ಕಾಸ್ಟ್ ಮೇಲೆ ಗುತ್ತಿಗೆಯನ್ನು ಮೊಟಕುಗೊಳಿಸುವ ಪ್ರಸ್ತಾವನೆಯನ್ನು ಅನುಮೋದಿಸಿಕೊಂಡು ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಊ) ಟೆಂಡರ್ ಕಾರ್ಯಕ್ರಮ ಪಟ್ಟಿಯಂತೆ (PERT CHART) ಕಾಮಗಾರಿಯನ್ನು ನಿಗದಿತ ಅವಧಿಯೊಳಗೆ ಪೂರ್ಣಗೊಳಿಸಲು ಗುತ್ತಿಗೆದಾರರಿಗೆ ಮೇಲಿಂದ ಮೇಲೆ ಸೂಚನೆಗಳನ್ನು ನೀಡಿ ಕಾಮಗಾರಿಗಳನ್ನು ಮುಗಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಋ) ಪ್ರಗತಿಯಲ್ಲಿ ರಸ್ತೆ ಕಾಮಗಾರಿಗಳ ಗುಣಮಟ್ಟವನ್ನು ಪರೀಕ್ಷಿಸಲು ಕಾರ್ಯನಿರ್ವಾಹಕ ಇಂಜಿನೀಯರರು ಅವಶ್ಯಕತೆಗೆ ತಕ್ಕಂತೆ ಮೇಲಿಂದ ಮೇಲೆ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿರುತ್ತಾರೆ.

638 ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ) : ಮಾನ್ಯ ನಗರಾಭಿವೃದ್ಧಿ, ಕಾನೂನು ನ್ಯಾಯ ಮತ್ತು ಮಾನವ ಹಕ್ಕು ಹಾಗೂ ಸಂಸದೀಯ ವ್ಯವಹಾರಗಳ ಮತ್ತು ಶಾಸನ ರಚನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಭಾಲ್ಕಿ ಪಟ್ಟಣಕ್ಕೆ ಸಮಗ್ರ ಕುಡಿಯುವ ನೀರಿನ ಯೋಜನೆಯನ್ನು ಅನುಷ್ಠಾನಗೊಳಿಸುವ ಸಲುವಾಗಿ ಕರ್ನಾಟಕ ನಗರ ನೀರು ಸರಬರಾಜು ಮತ್ತು